ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/ಶೈವಿ/03/ಸುತ್ತೋಲೆ/2024-25

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಅರಮನೆ ರಸ್ತೆ, ಬೆಂಗಳೂರು-01.
ದಿನಾಂಕ: 11-06-2024.

## ಸುತ್ತೋಲೆ

ವಿಷಯ: ಯುವ ರೆಡ್ ಕ್ರಾಸ್ ಘಟಕಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ: ಇಡಿ 64 ವಿವಿಧ 2011, ದಿನಾಂಕ: 22.12.2011.
2) ಈ ಕಛೇರಿಯ ಇದೇ ಕ್ರಮಾಂಕದ ಸುತ್ತೋಲೆ ದಿನಾಂಕ:19.06.2012.
3) ಸರ್ಕಾರದ ಆದೇಶ ಸಂಖ್ಯೆ: ಇಡಿ 38 ವಿವಿಧ 2016, ದಿನಾಂಕ:17.06.2016.
4) ಪ್ರಧಾನ ಕಾರ್ಯದರ್ಶಿ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ಇವರ ದಿ: 31-5-2024 ರ ಪತ್ರ ಸಂಖ್ಯೆ: IRCS/YRC/EST/15/333/24/25.

****

ಮೇಲ್ಕಂಡ ಉಲ್ಲೇಖ (1) ಮತ್ತು (3) ರ ಸರ್ಕಾರದ ಆದೇಶಗಳಲ್ಲಿ ಹಾಗೂ ಈ ಕಛೇರಿಯ ಸುತ್ತೋಲೆಯಲ್ಲಿ XV ನೇ ಕೇಂದ್ರ ಅಧಿನಿಯಮ-1920 ರಡಿ ಸ್ಥಾಪಿತವಾದ ಭಾರತೀಯ ರೆಡ್ ಕ್ರಾಸ್ ಸೊಸೈಟಿಯ ಬಹುಮುಖ್ಯ ಅಂಗವಾದ ಯುವ ರೆಡ್ ಕ್ರಾಸ್ ಘಟಕವನ್ನು ಪ್ರಾರಂಭಿಸಲು ಹಾಗೂ ಈ ಮೂಲಕ ಮಾನವೀಯತೆ, ನಿಷ್ಪಕ್ಷಪಾತ, ತಟಸ್ಥನೀತಿ, ಅಪರತಂತ್ರ, ಸ್ವಯಂಸೇವಾ ಮನೋಧರ್ಮ ಹಾಗೂ ಸರ್ವಲೌಕಿಕತ್ವದಂತಹ ತತ್ವಗಳನ್ನು ವಿದ್ಯಾರ್ಥಿಗಳಲ್ಲಿ ಮೈಗೂಡಿಸುವ ನಿಟ್ಟಿನಲ್ಲಿ ಯುವ ರೆಡ್ ಕ್ರಾಸ್ ಹೊಂದಿರುವ ಸಂಕಲ್ಪ ಹಾಗೂ ಉದ್ದೇಶಗಳನ್ನು ಈಡೇರಿಸಲು ಹಾಗೂ ಆರೋಗ್ಯ, ನಾಗರಿಕ ಹೊಣೆಗಾರಿಕೆ, ಸದ್ಭಾವನೆ ಮತ್ತು ಸ್ವಯಂ ಸೇವಾ ಮನೋಧರ್ಮಗಳಂತಹ ಆದರ್ಶ ಮತ್ತು ಪರಿಪಾಠಗಳನ್ನು ಯುವಕರಲ್ಲಿ ಸದೃಢಗೊಳಿಸುವುದಕ್ಕೆ ಅಭಿಮುಖವಾದ ರೆಡ್ ಕ್ರಾಸ್‌ನ ಪ್ರಯತ್ನಗಳಲ್ಲಿ ನೆರವಾಗಲು ಅನುವಾಗುವಂತೆ, ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸ್ಪಷ್ಟ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗಿರುತ್ತದೆ.

ಅದರಂತೆ ಈ ಕಛೇರಿ ವ್ಯಾಪ್ತಿಗೆ ಒಳಪಡುವ ಸರ್ಕಾರಿ/ಖಾಸಗಿ ಅನುದಾನಿತ ಕಾಲೇಜುಗಳು "ಯೂತ್ ರೆಡ್ ಕ್ರಾಸ್ ಘಟಕ" ವನ್ನು ಸ್ಥಾಪಿಸಿ, ರೂ. 1500/- (ಒಂದು ಸಾವಿರದ ಐದು ನೂರು ರೂಪಾಯಿಗಳು ಮಾತ್ರ) ಗಳನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇಲ್ಲಿಗೆ ಪಾವತಿಸಿ ನೋಂದಾಯಿಸಿಕೊಳ್ಳುವಂತೆಯು ಮತ್ತು ಕಾಲೇಜಿನ ಪ್ರವೇಶಾತಿ ಸಮಯದಲ್ಲಿ ಪ್ರತಿ ವಿದ್ಯಾರ್ಥಿಗಳಿಂದ ಕಾಲೇಜು ಶುಲ್ಕವನ್ನು ಸಂಗ್ರಹಿಸುವಾಗ "ಯೂತ್ ರೆಡ್ ಕ್ರಾಸ್ ಘಟಕ" ದಡಿಯಲ್ಲಿ ವಾರ್ಷಿಕವಾಗಿ ರೂ.50/- ಗಳನ್ನು ಸಂಗ್ರಹಿಸುವಂತೆಯು ಹಾಗೂ ಸಂಗ್ರಹಿಸಿದ ಶುಲ್ಕದಲ್ಲಿ 30% ನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇಲ್ಲಿಗೆ ಪಾವತಿಸಿ, ಉಳಿದ 70% ನ್ನು ಕಾಲೇಜಿನ ಚಟುವಟಿಕೆಗಳಿಗೆ ಬಳಸಿಕೊಳ್ಳುವಂತೆ ಆದೇಶಿಸಲಾಗಿರುತ್ತದೆ.

ಆದ್ದರಿಂದ ಇಲ್ಲಿಯವರೆವಿಗೂ ರೆಡ್ ಕ್ರಾಸ್ ಸಂಸ್ಥೆಯಲ್ಲಿ ನೋಂದಣಿಯಾಗದೇ ಇರುವ ಕಾಲೇಜುಗಳಲ್ಲಿ "ಯೂತ್ ರೆಡ್ ಕ್ರಾಸ್ ಘಟಕ" ವನ್ನು ಸ್ಥಾಪಿಸದೇ ಇರುವ ಕಾಲೇಜುಗಳು ಕೂಡಲೇ ಈ ಸುತ್ತೋಲೆಯೊಂದಿಗೆ ರವಾನಿಸಿರುವ ನೋಂದಣಿ ಅರ್ಜಿಯಂತೆ ಭರ್ತಿ ಮಾಡಿ ಅರ್ಜಿ ಶುಲ್ಕ ರೂ. 1500/- ಗಳನ್ನು ಪಾವತಿಸಿ, ನೋಂದಾಯಿಸಿಕೊಂಡು ಕಾಲೇಜುಗಳಲ್ಲಿ "ಯೂತ್ ರೆಡ್ ಕ್ರಾಸ್ ಘಟಕ" ವನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕಡ್ಡಾಯವಾಗಿ ಸ್ಥಾಪಿಸುವಂತೆ ಹಾಗೂ ಈ ಹಿಂದಿನ ವರ್ಷಗಳಲ್ಲಿ ಅಂದರೆ, 2016-17 ರಿಂದ ಇಲ್ಲಿಯವರೆವಿಗೂ ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇಲ್ಲಿಗೆ ಪಾವತಿಸಬೇಕಾದ 30% ಶುಲ್ಕವನ್ನು ಪಾವತಿಸದೇ ಇರುವ ಕಾಲೇಜುಗಳು ಸದರಿ ಸಂಸ್ಥೆಗೆ ಪಾವತಿಸಬೇಕಾದ ಶುಲ್ಕವನ್ನು ಪಾವತಿಸುವಂತೆ ಸೂಚಿಸಲಾಗಿದೆ.

ಮುಂದುವರೆದು, ಸದರಿ ಶುಲ್ಕವನ್ನು ಈ ಕೆಳಕಂಡ ವಿಳಾಸಕ್ಕೆ ಡಿ.ಡಿ./ಚೆಕ್ ಮೂಲಕ ಪಾವತಿಸತಕ್ಕದ್ದು.

ವಿಳಾಸದ ವಿವರ ಈ ಕೆಳಕಂಡಂತಿದೆ.

| DD/ CHEQUE SHOULD BE IN FAVOUR OF: | POSTAL ADDRESS: |
|---|---|
| INDIAN RED CROSS SOCIETY – YOUTH RED CROSS | #26, RED CROSS BHAVAN, 1st FLOOR, RACE COURSE ROAD, BENGALURU-560001. Email: yrckar@gmail.com, PH:- 080-22264205 |

ಮುಂದುವರೆದು, ಯುವ ರೆಡ್‌ಕ್ರಾಸ್ ಘಟಕಗಳಿಗೆ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗುವ ಮೊತ್ತದ 70% ನ್ನು ಕಾಲೇಜಿನಲ್ಲಿ ನಡೆಸುವ ರೆಡ್‌ಕ್ರಾಸ್ ಘಟಕಗಳ ಚಟುವಟಿಕೆಗಳಿಗೆ ಮಾತ್ರ ಬಳಸಿಕೊಳ್ಳತಕ್ಕದ್ದು ಹಾಗೂ ಆಯಾ ಕಾಲೇಜುಗಳಲ್ಲಿ ನಡೆಸಲಾಗುವ ಕಾರ್ಯಕ್ರಮಗಳ ಬಗ್ಗೆ ವಾರ್ಷಿಕ ವರದಿಯನ್ನು ಮೇಲೆ ತಿಳಿಸಲಾಗಿರುವ ರೆಡ್ ಕ್ರಾಸ್ ಸಂಸ್ಥೆಯ ವಿಳಾಸಕ್ಕೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

ಆಯುಕ್ತರು

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ;

1) ಪ್ರಾದೇಶಿಕ ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ.- ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2) ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3) ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳು ವರ್ಷವಾರು ಪಾವತಿಸಿದ ಮೂಲ ಡಿ.ಡಿ/ಚೆಕ್‌ನ್ನು ಲಗತ್ತಿಸಿ, ರೆಡ್‌ಕ್ರಾಸ್ ಸಂಸ್ಥೆ ಗೆ ಸಲ್ಲಿಸಿ, ಸ್ವೀಕೃತಿಯನ್ನು ತಪ್ಪದೇ ಪಡೆಯುವುದು.

ಪ್ರತಿಯನ್ನು:

1. ಪ್ರಧಾನ ಕಾರ್ಯದರ್ಶಿ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ, ನಂ.26, ರೆಡ್ ಕ್ರಾಸ್ ಭವನ, 1ನೇ ಮಹಡಿ, ರೇಸ್ ಕೋರ್ಸ್‌ರಸ್ತೆ,ಬೆಂಗಳೂರು-560001.
2. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು - ಈ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
3. ಕಛೇರಿ ಪ್ರತಿ.